ಸಂಖ್ಯೆ:ಪಿಪಿ3/ಕಲಬುರಗಿ/ಪ.ಪ್ರ/ /2021-22
ಎಸ್.ಸಿ.ನಂ:107/2019

3ನೇ ಸರಕಾರಿ ಅಭಿಯೋಜಕರ ಕಛೇರಿ
ಕಲಬುರಗಿ
ದಿನಾಂಕ:-18/08/2021

**ಪತ್ರಿಕಾ ಪ್ರಕಟಣೆ**

**"ಕೊಲೆ ಮಾಡಿದ ಆರೋಪಿತನಿಗೆ 07 ವರ್ಷ ಶಿಕ್ಷೆ ಮತ್ತು ದಂಡ ವಿಧಿಸಿರುವ ಕುರಿತು."**

**ಪ್ರಕರಣದ ಸಂಕ್ಷಿಪ್ತ ಸಾರಾಂಶ:-**

ಅಶೋಕ ನಗರ ಪೋಲಿಸ ಠಾಣೆ ವ್ಯಾಪ್ತಿಯ ಪೈಕಿ ಕೇಂದ್ರ ಬಸ್ ನಿಲ್ದಾಣದ ಎದುರುಗಡೆ ಇರುವ ಕಾಮತ ಹೋಟೇಲ್‌ನಲ್ಲಿ ದಿನಾಂಕ: 26-08-2017 ರಂದು 06:00 ಎ.ಎಂ.ಕ್ಕೆ ಮೃತ ಶರೀಫ್ ತಂದೆ ಮಷ್ಕೂದ್ ಜಾಹೀದ್ ಖಾನ್ ಇತನು ಹೋಟೇಲ್‌ನ ಮೊದಲನೆ ಮಹಡಿಯಲ್ಲಿ ಮಲಗಿಕೊಂಡಿದ್ದಾಗ ಪ್ರಕರಣದ ಆರೋಪಿ ನಿಲೇಶ ತಂದೆ ನಿವೃತ್ತಿ ಖಿರತ್ ಇತನು ಬಂದು ಒಂದು ಖಾಲಿ ಕಮರ್ಷಿಯಲ್ ಸಿಲೆಂಡರ್ ತೆಗೆದುಕೊಂಡು ಮಷ್ಕೂದ್ ಶರೀಫನ ತಲೆಗೆ ಹೊಡೆದು ಭಾರಿ ರಕ್ತಗಾಯ ಪಡಿಸಿ ಓಡಿಹೋಗಿದ್ದು, ನಂತರ ಮೃತನಿಗೆ ಉಪಚಾರಕ್ಕಾಗಿ ಕಲಬುರಗಿ ನಗರದ ಬೇರೆ-ಬೇರೆ ಆಸ್ಪತ್ರೆಗಳಿಗೆ ಸೇರಿಕೆ ಮಾಡಿ, ನಂತರ ಹೆಚ್ಚಿನ ಉಪಚಾರಕ್ಕಾಗಿ ಹೈದ್ರಾಬಾದ ನಗರದ ಓಸ್ಮಾನಿಯ ಸರ್ಕಾರಿ ಸರ್ಕಾರಿ ಆಸ್ಪತ್ರೆಗೆ ಸೇರಿಕೆ ಮಾಡಿದ್ದು ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ:31-08-2017 ರಂದು 02:30 ಎ.ಎಂ.ಕ್ಕೆ ಮಷ್ಕೂದ್ ಶರೀಫನು ಮೃತಪಟ್ಟಿರುತ್ತಾನೆ ಎಂದು ಮತ್ತು ಈ ಮೊದಲು ಹಲವಾರು ಬಾರಿ ಕುಡಿದ ಅಮಲಿನಲ್ಲಿ ಆರೋಪಿತನು ಮೃತನೊಂದಿಗೆ ತಂಟೆ-ತಕರಾರು ಮಾಡಿಕೊಂಡಾಗ ಫಿರ್ಯಾದಿ ಸಂತೋಷ ತಂದೆ ಶಂಭು ಇವರು ಬಂದು ಜಗಳ ಬಿಡಿಸಿರುತ್ತಾರೆ ಅಂತಾ ಆರೋಪಿಸಿ ನೀಡಿದ ದೂರಿನನ್ವಯ, ಅಶೋಕ ನಗರ ಪೊಲೀಸ ಠಾಣೆಯಲ್ಲಿ ದೂರು ದಾಖಲಾಗಿದ್ದು, ನಂತರ ತನಿಖೆ ಪೂರ್ಣಗೊಳಿಸಿ, ಆಗಿನ ತನಿಖಾಧಿಕಾರಿಗಳಾದ ಶ್ರೀ ರಮೇಶ ಕಾಂಬಳೆ, ಪಿ.ಐ ಅಶೋಕ ನಗರ ಪೋಲಿಸ ಠಾಣೆ ಕಲಬುರಗಿ ರವರು ಆರೋಪಿತನ ವಿರುದ್ಧ ಕಲಂ:-302, ಭಾರತೀಯ ದಂಡ ಸಂಹಿತೆ (ಐಪಿಸಿ) ಅಡಿಯಲ್ಲಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಪ್ರಕರಣದ ವಿಚಾರಣೆಯನ್ನು <u>ಮಾನ್ಯ ಶ್ರೀ. ಜಗದೀಶ ವಿ.ಎನ್, 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು</u>, ಪ್ರಕರಣದ ವಿಚಾರಣೆಯನ್ನು ನಡೆಸಿ, ನಂತರ ಸಾಕ್ಷ್ಯಾಧಾರಗಳನ್ನು ಪರಾಮರ್ಷಿಸಿ ಆರೋಪಿ ನಿಲೇಶ ತಂದೆ ನಿವೃತ್ತಿ ಖಿರತ್ ಇತನು ಕಲಂ:- 304(ii) ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಆರೋಪ ಎಸಗಿರುವುದು ರುಜುವಾತಾಗಿ ತಪ್ಪಿತಸ್ಥನೆಂದು ನಿರ್ಣಯಿಸಿ, ಸದರಿ ಅಪರಾಧಕ್ಕಾಗಿ ಆರೋಪಿಗೆ **07 ವರ್ಷದ ಸಾದಾ ಶಿಕ್ಷೆ ಮತ್ತು ರೂ.10,000/- ದಂಡವನ್ನು ವಿಧಿಸಿರುತ್ತಾರೆ**. ದಂಡವನ್ನು ಭರಿಸದಿದ್ದಲ್ಲಿ ಹೆಚ್ಚುವರಿಯಾಗಿ 01 ವರ್ಷದ ಸಾದಾ ಕಾರಾಗೃಹ ವಾಸದ ಶಿಕ್ಷೆ ವಿಧಿಸಿ ತೀರ್ಮ ನೀಡಿದ್ದು ಇರುತ್ತದೆ.

ಸರಕಾರದ ಪರವಾಗಿ <u>ಶ್ರೀ ಗುರುಲಿಂಗಪ್ಪ ಶ್ರೀಮಂತ ತೇಲಿ, 3ನೇ ಅಪರ ಸರಕಾರಿ ಅಭಿಯೋಜಕರು</u>, ಕಲಬುರಗಿ. ಇವರು ವಾದವನ್ನು ಮಂಡಿಸಿರುತ್ತಾರೆ.

(sd) 18/8/21

(ಗುರುಲಿಂಗಪ್ಪ ಶ್ರೀಮಂತ ತೇಲಿ)
3ನೇ ಅಪರ ಸರಕಾರಿ ಅಭಿಯೋಜಕರು,
ಕಲಬುರಗಿ.
ಮೊ.ನಂ:- 9448390177

<u>ಇವರಿಗೆ,</u>
ಮಾನ್ಯ ಉಪ ನಿರ್ದೇಶಕರು,
ವಾರ್ತಾ ಮತ್ತು ಪ್ರಚಾರ ಇಲಾಖೆ ಕಲಬುರಗಿ. ಇವರಿಗೆ ಮಾಹಿತಿಗಾಗಿ ಸದರಿ ಪತ್ರಿಕಾ ಪ್ರಕಟಣೆಯನ್ನು ಎಲ್ಲಾ ಪ್ರಮುಖ ಕನ್ನಡ ಮತ್ತು ಇಂಗ್ಲಿಷ ದಿನಪತ್ರಿಕೆಯಲ್ಲಿ ಮುದ್ರಿಸಲು, ಕ್ರಮ ಕೈಗೊಳಲು ವಿನಂತಿ.

Scanned with CamScanner